ಗೆಳೆಯ: ನಿನ್ನ ಕಣ್ಣೇಕೆ ಊದಿ ಕೊಂಡಿದೆ?

ಗುಂಡ: ನಿನ್ನೆ ಹೆಂಡತಿಯ ಬರ್ತ್‌ಡೆ ಇದ್ದುದರಿಂದ ನಾನೊಂದು ಕೇಕ್ ಖರೀದಿಸಿದ್ದೆ.

ಗೆಳೆಯ: ಕೇಕ್ ಖರೀದಿಸಿರುವುದಕ್ಕೂ ನಿನ್ನ ಕಣ್ಣು ಊದಿರುವುದಕ್ಕೂ ಏನಯ್ಯ ಸಂಬಂಧ?

ಗುಂಡ: ಅಲ್ಲೇ ಇದೆ ಕಣೋ ಸಮಸ್ಯೆ... ನನ್ನ ಹೆಂಡತಿಯ ಹೆಸರು ತಪಸ್ಯಾ. ಆದರೆ ಬೇಕರಿಯಾತ ನನ್ನ ಗ್ರಹಚಾರಕ್ಕೆ ಆ ಕೇಕ್‌ನಲ್ಲಿ 'ಹ್ಯಾಪಿ ಬರ್ತ್‌ಡೆ ಟು ಸಮಸ್ಯಾ' ಎಂದು ಬರೆದು ಬಿಟ್ಟಿದ್ದ!

★★★

ಗುಂಡ: ಎಂಜಿನಿಯರಿಂಗ್ ಪದವಿ ಪಡೆದಿದ್ದೇನೆ. ಆದರೆ ಯಾವುದೇ ಉದ್ಯೋಗ ಲಭಿಸಿಲ್ಲ. ಏನಾದರೊಂದು ಉಪಾಯ ಸೂಚಿಸಿ ಸ್ವಾಮೀಜಿ.

ಸ್ವಾಮೀಜಿ: ಯಾವ ಬ್ರಾಂಚ್ ಮಗೂ?

ಗುಂಡ: ಕಂಪ್ಯೂಟರ್ ಎಂಜಿನಿಯರಿಂಗ್.

ಸ್ವಾಮೀಜಿ: ನನ್ನದು ಎಲೆಕ್ಟ್ರಾನಿಕ್ಸ್ ಆಗಿತ್ತು ವತ್ಸಾ!

★★★

ಪತ್ನಿ: ರೀ, ಒಂದಿಷ್ಟು ಸಮಯವಾಗಿದ್ದರೆ ಜನರು ನನ್ನ ಬಗ್ಗೆ ಅದೆಷ್ಟು ಕಾಳಜಿ ವಹಿಸುತ್ತಿದ್ದರು ಅಲ್ವೇನ್ರೀ?

ಪತಿ: ಹಾಗೇನಿಲ್ಲ, ಜನರು ನಿನ್ನನ್ನು ಕಂಡು ಭಯಪಡುತ್ತಿದ್ದರು..

ಪತ್ನಿ: ಯಾಕ್ರೀ ಹಾಗಂತೀರಾ?

ಪತಿ: ಇನ್ನೇನು? ನೋಡು ಕೆಟ್ಟ ಘಳಿಗೆ ವಕ್ರಿಸುತ್ತಿದೆ ಎಂದು ಜನರಾಡಿಕೊಳ್ಳುತ್ತಿದ್ದರು!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**



ಅಮ್ಮ: (ಗಾಬರಿಯಿಂದ) ಮಗನೇ ಬೇಗ ಮನೆಗೆ ಬಾ. ನಿನ್ನ ಹೆಂಡತಿಗೆ ಲಕ್ವ ಹೊಡೆದು ಬಿಟ್ಟಿದೆ. ಕಣ್ಣು ಮೇಲೆ ಹೋಗಿದೆ. ಬಾಯಿ ಸೊಟ್ಟ ಆಗಿದೆ. ಕುತ್ತಿಗೆ ಮುರಿದ ರೀತಿ ಇದೆ.

ಮಗ: ನೀನು ಹೆದರಿಕೊಳ್ಳಬೇಡ; ಅವಳು ಸೆಲ್ಫಿ ತಗೋತಾ ಇದ್ದಾಳೆ.

**(ಸಂಗ್ರಹ) ಬಿ.ಎಸ್. ರಾಜಲಕ್ಷ್ಮಿ**

ಮಗ: ಅಮ್ಮ ಈ ಅಂಗಡಿಯಲ್ಲಿ ಪಟಾಕಿ ಕೊಡ್ಸು.

ಅಮ್ಮ: ಅಯ್ಯೋ ಅದು ಪಟಾಕಿ ಅಂಗಡಿ ಅಲ್ಲ. ಲೇಡೀಸ್ ಹಾಸ್ಟೆಲ್.

ಮಗ: ಮತ್ತೆ ಅಪ್ಪ ನಿನ್ನೆ ಅವರ ಫ್ರೆಂಡ್ಸ್ ಹತ್ತಿರ ಹೇಳ್ತಿದ್ರು, ಇಲ್ಲಿ ಮಸ್ತ್ ಪಟಾಕಿಗಳಿವೆ ಅಂತ!

★★★

ಲೇಡೀಸ್ ಹಾಸ್ಟೆಲ್‌ಗೆ ಬೆಂಕಿ ಹತ್ತಿಕೊಂಡಿತು. ಪಕ್ಕದ ಹಾಸ್ಟೆಲ್‌ನ ಹುಡುಗರು ಮುಗಿಬಿದ್ದರು. ಆಗ ಟಿವಿಯಲ್ಲಿ ಬಂದ ಬ್ರೇಕಿಂಗ್ ನ್ಯೂಸ್... 'ಮಹಿಳೆಯರ ಹಾಸ್ಟೆಲ್‌ಗೆ ಬಿದ್ದ ಬೆಂಕಿಯನ್ನು ಹತೋಟಿಗೆ ತರಲಾಗಿದೆ. ಆದರೆ ಹುಡುಗರನ್ನು ಹತೋಟಿಗೆ ತರುವುದು ಕಷ್ಟವಾಗಿದೆ!'

★★★

ಅತಿಥಿ: ಬಾಗಿಲವರೆವಿಗೂ ಬಂದು ಬೀಳ್ಕೊಡುತ್ತಿದ್ದೀರಿ. ತುಂಬಾ ಸಂತೋಷ...

ಮನೆ ಒಡತಿ: ಹಾಗೇನಿಲ್ರೀ, ನಿನ್ನೆ ತಾನೆ ಹೊಸ ಚಪ್ಪಲಿ ಖರೀದಿಸಿದ್ದೆ.

★★★

ಹೆಂಡತಿ: ಈ ಮನೆಯಲ್ಲಿ ನಾನು ಇರಬೇಕು, ಇಲ್ಲಾ ನಿಮ್ಮ ಅಮ್ಮ ಇರಬೇಕು.

ಗಂಡ: (ಸಿಟ್ಟಿನಿಂದ) ಇಬ್ರೂ ಬೇಕಾಗಿಲ್ಲ! ಕೆಲಸದವಳು ಒಬ್ಬಳು ಇದ್ರೆ ಸಾಕು.

**(ಸಂಗ್ರಹ) ಎಸ್.ಸಿ. ರಮೇಶ್, ಮೈಸೂರು**



ಗಣಿತ ಟೆಸ್ಟ್‌ನಲ್ಲಿ ಮೇಷ್ಟ್ರು ಗುಂಡನಿಗೆ ಸೊನ್ನೆ ಮಾರ್ಕು ನೀಡಿದ್ದರು. ಕ್ಲಾಸು ಮುಗಿಯುವ ತನಕ ಕಾದಿದ್ದು, ಗುಂಡ ಮೇಷ್ಟ್ರ ಬಳಿ ಹೋಗಿ 'ಏನ್ಸಾರ್ ಅನ್ಯಾಯ ಇದು, ನನಗೆ ಗಣಿತದಲ್ಲಿ ಸೊನ್ನೆ ಮಾರ್ಕು ಕೊಟ್ಟು ಬಿಟ್ಟಿದ್ದೀರಲ್ಲಾ?' ಅಂತ ಕೇಳಿದ.

ಮೇಷ್ಟ್ರು ಸಮಾಧಾನದಿಂದ: 'ಏನ್ಮಾಡಲಿ ಹೇಳು, ಅದಕ್ಕಿಂತ ಕಡಿಮೆ ಮಾರ್ಕು ಇಲ್ಲವೇ ಇಲ್ಲವಲ್ಲ' ಎಂದರು.

★★★

ಮೇಷ್ಟ್ರು: ಮಂಡ್ಯ ಯಾವುದಕ್ಕೆ ಪ್ರಸಿದ್ಧಿ?

ಪುಟ್ಟ: ಗೊತ್ತಿಲ್ಲ.

ಮೇಷ್ಟ್ರು: ನೀನು ಹಾಲಿಗೆ ಏನನ್ನು ಬೆರೆಸಿಕೊಂಡು ಕುಡಿತೀಯ?

ಪುಟ್ಟ: ಸಕ್ಕರೆ.

ಮೇಷ್ಟ್ರು: ಹಾಂ! ಸಕ್ಕರೆ ಎಲ್ಲಿಂದ ಬರುತ್ತೆ?

ಪುಟ್ಟ: ಸಾರ್ ನಮ್ಮ ಪಕ್ಕದ ಮನೆಯಿಂದ ಬರುತ್ತೆ!

**(ಸಂಗ್ರಹ) ಜೆ.ಜೆ. ದೊಡ್ಡಮನಿ, ವಿಜಯಪುರ**